**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.**

**ಎಸ್.ಸಿ. 19/2024**

1. ಸೈದಾಪೂರ ಪೊಲೀಸಠಾಣೆ .....ಫಿರ್ಯಾದಿ

ವಿರುದ್ಧ

1. ರಾಯಪ್ಪ ಮತ್ತು ಇತರರು .....ಆರೋಪಿತರು

**ದೋಷಾರೋಪಣೆ**

ನಾನು **ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್** ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದ

1. ರಾಯಪ್ಪ ತಂದೆ ಹಣಮಂತ, ವಯಸ್ಸುಃ 52 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಜೈಗ್ರಾಮ ತಾಃ ಗುರುಮಠಕಲ್ ಜಿಃ ಯಾದಗಿರಿ

2. ಕಾಳಪ್ಪ ತಂದೆ ಗುಂಜಲ್ಲಪ್ಪ ಗುಂಜನೂರ, ವಯಸ್ಸುಃ 40 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಜೈಗ್ರಾಮ ತಾಃ ಗುರುಮಠಕಲ್ ಜಿಃ ಯಾದಗಿರಿ

3. ರಮೇಶ ತಂದೆ ನಿಂಗಪ್ಪ ಗುಂಜನೂರ, ವಯಸ್ಸುಃ 45 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಜೈಗ್ರಾಮ ತಾಃ ಗುರುಮಠಕಲ್ ಜಿಃ ಯಾದಗಿರಿ

4. ಸಣ್ಣ ಗುಂಜಲಪ್ಪ ತಂದೆ ಸಿದ್ರಾಮಪ್ಪ ಗುಂಜನೂರ, ವಯಸ್ಸುಃ 39 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಜೈಗ್ರಾಮ ತಾಃ ಗುರುಮಠಕಲ್ ಜಿಃ ಯಾದಗಿರಿ

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಸೈದಾಪೂರ ಪೊಲೀಸ ಠಾಣಾ ಹದ್ದಿಯ ಪೈಕಿ ಬರುವ ಜೈಗ್ರಾಮ ಗ್ರಾಮದ ಅಂತಪ್ಪ ದೇವಸ್ಥಾನದ ಕಟ್ಟೆ ಮೇಲೆ ದಿಃ 15.04.2023 ರಂದು ಬೆಳಿಗ್ಗೆ 9.15 ಗಂಟೆ ಸುಮಾರಿಗೆ ಚಾಸಾ-4 ರವರು ಕುಳಿತಿದ್ದಾಗ 1 ನೇ ಆರೋಪಿ ಅಂತಪ್ಪ ದೇವಸ್ಥಾನದ ಬಳಿ ಬಂದು ದೇವಸ್ಥಾನದ ಆವರಣದಲ್ಲಿದ್ದ ರಥದ ಚಕ್ರಕ್ಕೆ ತಡೆ ಹಾಕುವ ದಪ್ಪನೆಯ ಕಟ್ಟಿಗೆಯನ್ನು ತೆಗೆದುಕೊಂಡು ಬಂದು ದೇವಸ್ಥಾನದ ಕಟ್ಟೆ ಮೇಲೆ ಕುಳಿತಿದ್ದ ಚಾಸಾ-4 ರವರಿಗೆ ತಲೆಗೆ ಹೊಡೆದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 326 ಮತ್ತು 307

ಸಹವಾಚಕ 34 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ-4 ರವರಿಗೆ ನಿನ್ನನ್ನು ಕೊಂಡು ಹಾಕುತ್ತೇನೆ, ನಿನ್ನನ್ನು ಭೋಮಿ ಮೇಲೆ ಇಲ್ಲದಂತೆ ಮಾಡುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 506 ಸಹವಾಚಕ 34 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ 2 ರಿಂದ 4 ರವರು ನೀವುಗಳು 1 ನೇ ಆರೋಪಿಗೆ ಚಾಸಾ-4 ರವರಿಗೆ ಹೊಡೆದು ಕೊಲೆ ಮಾಡುವುದಕ್ಕೆ ದುಷ್ಪ್ರೇರಣೆ ನೀಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 109 ಸಹವಾಚಕ 34 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ 26.11.2025 ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.